Reg. No. | | | | | | | | | |

**BCMKAL 153**

ಗುಣಾಂಕ ಆಧಾರಿತ ಎರಡನೆಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಏಪ್ರಿಲ್/ಮೇ 2017
**(Common to all Batches Scheme)**

**ಕನ್ನಡ**

**ಕನ್ನಡ ಭಾಷಾ ಪತ್ರಿಕೆ – II**

Time : 3 Hours Max. Marks : 80

## ಭಾಗ – 1

**(ಕಾವ್ಯ)**

I. ಅ) ಒಂದು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ : **(1×8=8)**

1) ಮಾದಾರ ಚೆನ್ನಯ್ಯನ ಗುಪ್ತ ಭಕ್ತಿಯನ್ನು ಶಿವ ಪ್ರಕಟಗೊಳಿಸಿದ ಬಗೆಯನ್ನು ವಿವರಿಸಿರಿ.

2) ಮಹಾಶ್ವೇತೆ–ಪುಂಡರೀಕರ ಪ್ರಥಮ ಭೇಟಿಯ ಸ್ವಾರಸ್ಯವನ್ನು ಕಾವ್ಯಭಾಗದ ಆಧಾರದಲ್ಲಿ ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) 'ಉತ್ತರಾದೇವಿ' ಜನಪದ ಕಥನ ಗೀತೆಯಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಸ್ಥಿತಿಯನ್ನು ವಿಮರ್ಶಿಸಿರಿ.

2) "ಗಿಳಿಯು ಪಂಜರದೊಳಿಲ್ಲ" ಒಂದು ಶೋಕ ನಿವೇದನೆಯ ಕೀರ್ತನೆ – ಸಮರ್ಥಿಸಿರಿ.

ಇ) ಎರಡರ ಬಗ್ಗೆ ಟಿಪ್ಪಣಿ ಬರೆಯಿರಿ : **(2×3=6)**

1) ಸರ್ವಜ್ಞ

2) ಎಚ್.ಎಸ್. ವೆಂಕಟೇಶಮೂರ್ತಿ

3) ಆರ್.ಎನ್. ಜಯಗೋಪಾಲ್.

II. ಅ) ಒಂದು ಪದ್ಯದ ಸಂದರ್ಭ ಸೂಚಿಸಿ ಭಾವವನ್ನು ವಿವರಿಸಿರಿ. **(1×5=5)**

1) ಇದು ದಿನವೋ ರಾತ್ರಿಯೋ ಮೇ
ಣಿದು ದುಃಖಿವೋ ರುಜೆಯು ಕಳವಳವೊ ಪೇಟೆದು ಪೊ
ಲ್ಲದೇ ತಾನಿ ದೊಳ್ಳಿತೋ ಮೇ
ಣಿದೆಂಬುದಂ ಬಗೆಯಲಾರ್ತೆನಿಲ್ಲಾ ಕ್ಷಣದೊಳ್ ||

P.T.O.

2) ಮೈಯನೆ ಹಿಂಡಿ ನೊಂದರು ಕಬ್ಬು ಸಿಹಿಯ ಕೊಡುವುದು।
ತೇಯುತಲಿದ್ದರು ಗಂಧದ ಪರಿಮಳ ತುಂಬಿ ಬರುವುದು।
ತಾನೇ ಉರಿದರು ದೀಪವು ಮನೆಗೆ ಬೆಳಕ ತರುವುದು।
ದೀಪ ಬೆಳಕ ತರುವುದು.

ಆ) ಎರಡು ಸಾಲುಗಳ ಸಂದರ್ಭ ಬರೆದು ಸ್ವಾರಸ್ಯ ವಿವರಿಸಿರಿ. **(2×3=6)**

1) ಕೋಟಿಗಳಲ್ತೆ ತಾಪಸರ್
2) ಅಕ್ಕ ನಾನಿಲ್ಲದ ವೇಳೆ ಬೆಕ್ಕು ಕೊಂಡು ಹೋಯಿತಯ್ಯೋ.
3) ಕಾಡುಗಳ ಸವರಿ ನಾಡ ವಿಸ್ತರಣೆ ನಡೆದೇ ಇತ್ತು ಹಗಲೂ ಇರುಳು.

III. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ: **(5×1=5)**

1) ಮಹಾಶ್ವೇತೆಯ ತಂದೆ ತಾಯಿಗಳ ಹೆಸರುಗಳನ್ನು ತಿಳಿಸಿರಿ.
2) ರಗಳೆ ಕಾವ್ಯ ಪ್ರಕಾರವನ್ನು ಜೀವಂತಗೊಳಿಸಿದ ಪ್ರಸಿದ್ಧ ಕವಿ ಯಾರು ?
3) ಕರ್ನಾಟಕ ಸಂಗೀತದ ಪಿತಾಮಹ ಯಾರು ?
4) ಸರ್ವಜ್ಞ ತನ್ನ ಕಾವ್ಯ ರಚನೆಗೆ ಬಳಸಿದ ಛಂದಸ್ಸು ಯಾವುದು ?
5) ಕನ್ನಡ ಚಲನಚಿತ್ರ ರಂಗದ 'ಭೀಷ್ಮ' ಯಾರು ?

## ಭಾಗ – 2

## (ಗದ್ಯ)

IV. ಅ) **ಒಂದು** ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ: **(1×8=8)**

1) ಭಾರತೀಯ ಕುಟುಂಬ ವ್ಯವಸ್ಥೆಯೊಳಗಿನ ಮಹಿಳೆಯ ಸ್ಥಿತಿಯ ಕುರಿತು ಡಾ. ಎನ್. ಗಾಯತ್ರಿಯವರು ವ್ಯಕ್ತಪಡಿಸಿದ ವಿಚಾರಗಳನ್ನು ವಿವರಿಸಿರಿ.
2) ಅಕ್ಷರ ಸಂತ ಹರೇಕಳ ಹಾಜಬ್ಬರ ಪ್ರಾಮಾಣಿಕ ಪರಿಶ್ರಮದ ವ್ಯಕ್ತಿತ್ವ ಲೇಖನದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

ಆ) **ಒಂದು** ಪ್ರಶ್ನೆಗೆ ಪ್ರಬಂಧದ ಹಿನ್ನೆಲೆಯಲ್ಲಿ ಉತ್ತರಿಸಿರಿ: **(1×8=8)**

1) ಯುವ ಜನಾಂಗಕ್ಕೆ ಅಗತ್ಯವಿರುವ 'ದರ್ಶನ'ದ ಬಗ್ಗೆ ಕುವೆಂಪುರವರ ಚಿಂತನೆಗಳನ್ನು ವಿವರಿಸಿರಿ.
2) ಕೊರಿಯರ್ ಬಾಯ್ ಆಗಿ ಸೇರಿದ ಹುಡುಗ 'ಎಸ್.ಡಿ.' ಎಂಬ ಉದ್ಯಮ ಪತಿಯಾದ ಹಂತಗಳನ್ನು ಎ.ಆರ್. ಮಣಿಕಾಂತ್‌ರವರು ಹೇಗೆ ವಿವರಿಸಿದ್ದಾರೆ ? ವಿವರಿಸಿರಿ.

V. ಒಂದು ಪ್ರಶ್ನೆಗೆ ವಿಶ್ಲೇಷಣಾತ್ಮಕವಾಗಿ ಉತ್ತರಿಸಿರಿ : (1×5=5)

1) ಸರ್ವಜ್ಞನ ಮಾತುಗಳಲ್ಲಿ ಇರುವ ರಸಿಕತೆಯನ್ನು ಚೆನ್ನವೀರ ಕಣವಿಯವರು ಹೇಗೆ ತೋರಿಸಿಕೊಟ್ಟಿದ್ದಾರೆ ? ವಿವರಿಸಿರಿ.

2) "ಬದುಕು ಕಲಿಸುವ ಪಾಠವನ್ನು ಯಾವ ವಿಶ್ವವಿದ್ಯಾನಿಲಯವೂ ಕಲಿಸುವುದಿಲ್ಲ." ಎ.ಆರ್. ಮಣಿಕಾಂತ್ ಅವರ ಮಾತನ್ನು ವಿವೇಚಿಸಿರಿ.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ : (1×4=4)

1) 'ಶ್ರೀ ರಾಮಾಯಣ ದರ್ಶನಂ' ಕೃತಿಗೆ ಯಾವ ಪ್ರಶಸ್ತಿ ದೊರೆತಿದೆ ?

2) "ಚೆಂಬೆಳಕಿನ ಕವಿ" ಎಂದು ಯಾರನ್ನು ಕರೆಯುತ್ತಾರೆ ?

3) ಬೇಂದ್ರೆಯವರ ಕಾವ್ಯನಾಮ ಯಾವುದು ?

4) ಸುದೀಪ್ ದತ್ತಾ ಬಾಂಬೆಗೆ ಬಂದದ್ದು ಯಾವಾಗ ?

## ಭಾಗ – 3

## (ನಾಟಕ)

VII. ಅ) ಒಂದು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ: (1×8=8)

1) ನೀಲಾಂಜನೆ ನೃತ್ಯದ ಸನ್ನಿವೇಶ ಮತ್ತು ಪರಿಣಾಮಗಳನ್ನು ನಾಟಕದಲ್ಲಿ ಹೇಗೆ ಚಿತ್ರಿಸಲಾಗಿದೆ ? ವಿವರಿಸಿರಿ.
2) ದೇವದತ್ತ–ನೀಲಾಂಜನೆಯರ ಸರಸ ಸಲ್ಲಾಪದ ಸ್ವಾರಸ್ಯಗಳನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×6=6)

1) ಭರತ–ಬಾಹುಬಲಿ ನಡುವೆ ನಡೆದ ಯುದ್ಧ ಯಾವುದು ? ಅದರ ಪರಿಣಾಮಗಳನ್ನು ಬರೆಯಿರಿ.
2) ಜಿನೇಂದ್ರನ ಓಲಗ ಶಾಲೆಯ ಗಾಂಭೀರ್ಯವನ್ನು ಕುರಿತು ಬರೆಯಿರಿ.

VIII. ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : (2×2=4)

1) ನಾನು ಇಂದ್ರ ಸಭೆಯ ನರ್ತಕಿ. ಮೀನಾಡುವುದು ತಿಳಿನೀರಲ್ಲಿ ಅಲ್ಲವೇ ?

2) ಸೋತು ಹತಾಶನಾಗಿ ಚಕ್ರ ಪ್ರಯೋಗಿಸಿದೆಯಲ್ಲಾ, ಇದರಿಂದೇನಾಯಿತು ?

3) ನಿನ್ನಿಂದ ನಾವು ದೇವತೆಗಳೂ ಕೂಡ ಪಾಠ ಕಲಿಯಬೇಕಾಗಿದೆ.

IX. ಒಂದು ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ನಿಸರ್ಗಪ್ರಿಯರ ಪೂರ್ಣ ಹೆಸರೇನು ?

2) ದೇವಾಂಗನೆ ಎಂದು ಯಾರಿಗೆ ಕರೆಯುತ್ತಾರೆ ?

---